

## ತುಂಗೆಗೊಂದು ತೂಗುಸೇತುವೆ!

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹರಿಹರಪುರ ಮಠದ ಹತ್ತಿರದ ನಡಿಗೆದೂರದಲ್ಲಿ ತುಂಗಾನದಿಗೆ ಅಡ್ಡಲಾಗಿ ತೂಗುಸೇತುವೆಯೊಂದನ್ನು ನಿರ್ಮಿಸಲಾಗಿದೆ. ನದಿಯಾಚೆ ದಡದ ಹಳ್ಳಿಗಳು ಮತ್ತು ಹರಿಹರಪುರ ಪಟ್ಟಣದ ಮಧ್ಯೆ ಇದು ಸಂಪರ್ಕಸೇತುವಾಗಿದೆ. ಕಬ್ಬಿಣದ ದಪ್ಪ ತಂತಿಗಳು, ಸರಳು ಮತ್ತು ಜಾಲರಿಗಳನ್ನು ಬಳಸಿ ಸೇತುವೆಯನ್ನು ನಿರ್ಮಿಸಲಾಗಿದೆ. ಸೇತುವೆಯ ಮೇಲಿನ ನಡಿಗೆಹಾದಿಯಲ್ಲಿ ಮರದ ಫಲಕಗಳನ್ನು ಕ್ರಮಬದ್ಧವಾಗಿ ಹಾಸಲಾಗಿದೆ. ಎರಡೂ ಪಕ್ಕಕ್ಕೆ ಕಬ್ಬಿಣದ ಜಾಲರಿಯನ್ನು ದಪ್ಪ ಸರಳುಗಳ ಆಧಾರದಲ್ಲಿ ಜೋಡಿಸಿ ನಡಿಗೆಗೆ ಸುರಕ್ಷತೆ ಕಲ್ಪಿಸಲಾಗಿದೆ. ನಡೆಯುವಾಗ ಕಿರ್ ಕಿರ್ ಸದ್ದಿನೊಂದಿಗೆ ಸೇತುವೆಯೂ ಒಂದಿಷ್ಟು ಜೋಲಾಡುವುದರಿಂದ ಎದೆಯೊಳಗೆ ಕೊಂಚ ನಡುಕ ಹುಟ್ಟುವುದು ಸಹಜ. ಕೆಳಗೆ ತುಂಬಿ ಹರಿಯುವ ತುಂಗೆ.... ತೂಗಾಡುವ ಸೇತುವೆಯ ಮೇಲೆ ನಾವು... ಈ ದೃಶ್ಯವನ್ನು ಕಲ್ಪಿಸಿಕೊಂಡರೇನೇ ರೋಮಾಂಚನಕಾರಿಯಲ್ಲವೇ? ಅಂದಹಾಗೆ ಈ ಸೇತುವೆಯ ಮೇಲೆ ದ್ವಿಚಕ್ರ ವಾಹನಗಳು ಸಲೀಸಾಗಿ ಓಡಾಡುತ್ತವೆ. ಕೆಲವೊಂದು ಚಿತ್ರೀಕರಣಗಳೂ ಇಲ್ಲಿ ನಡೆದಿವೆ.

—ಧರ್ಮಾನಂದ ಶಿರ್ವ, ಬೆಂಗಳೂರು



## ವ್ಯರ್ಥವಾಯಿತೇ ಸುವರ್ಣಸೌಧ!

2007ರಲ್ಲಿ ಶಂಕುಸ್ಥಾಪನೆಗೊಂಡ 2012ರಲ್ಲಿ ಉದ್ಘಾಟನೆಯೂ ಆದ ಸುವರ್ಣಸೌಧವನ್ನು ಬಿ.ಜಿ. ಶಿರ್ಕೆ ಕನ್‌ಸ್ಟ್ರಕ್ಷನ್ ಕಂಪನಿಯು ನಿರ್ಮಿಸಿದೆ. ಇದಕ್ಕೆ ತಗುಲಿದ ವೆಚ್ಚ ಬರೋಬ್ಬರಿ ₹500 ಕೋಟಿ. ಈ ಪೈಕಿ ಸುಮಾರು ₹100ಯಷ್ಟು ಸುವರ್ಣಸೌಧದ ಒಳಾಂಗಣದ ತಯಾರಿಗೆ ವ್ಯಯಸಲಾಗಿದೆ. ನಾಲ್ಕು ಅಂತಸ್ತಿನ ಈ ಕಟ್ಟಡವು ಒಟ್ಟು 60,400 ಚದರ ಮೀಟರ್ ವಿಸ್ತೀರ್ಣದಲ್ಲಿ ರೂಪುಗೊಂಡಿದೆ. 10 ವರ್ಷಗಳ ಹಿಂದೆಯೇ ಅಷ್ಟೊಂದು ಹಣವನ್ನು ವ್ಯಯಿಸಿ ನಿರ್ಮಿಸಿದ ಈ ಕಟ್ಟಡದಲ್ಲಿ ಯಾವುದೇ ಸರ್ಕಾರಿ ಕಾರ್ಯಗಳು ಇನ್ನೂ ಸರಿಯಾಗಿ ನಡೆಯುತ್ತಿಲ್ಲವೆನ್ನುವುದು ಬಹಳ ಬೇಸರದ ವಿಚಾರ. ಸರ್ಕಾರದ ಕಾರ್ಯಕ್ಕೆ ಸಂಪೂರ್ಣ ಚಟುವಟಿಕೆಯಿಂದ ಬಳಸಿಕೊಳ್ಳದಿದ್ದರೂ ಸೌಧದ ನಿರ್ವಹಣೆಗೆ ಪ್ರತಿ ತಿಂಗಳು ಲಕ್ಷಾನುಗಟ್ಟಲೆ ಹಣವನ್ನು ವ್ಯಯಿಸಲಾಗುತ್ತಿದೆ. ಭವಿಷ್ಯದಲ್ಲಾದರೂ ಸುವರ್ಣಸೌಧದ ಉದ್ದೇಶ ಈಡೇರುವುದೇ? ಈ ಪ್ರಶ್ನೆಗೆ ನಮ್ಮನ್ನಾಳುವ ರಾಜಕಾರಣಿಗಳೇ ಉತ್ತರಿಸಬೇಕಿದೆ.

—ಆರ್ಕೆ ಆಡುಕಳ, ಬೆಂಗಳೂರು

## ಮೊದಲ ಚುನಾವಣಾ ಕರಪತ್ರ

ಇದು 1952ರಲ್ಲಿ ನಡೆದ ಮೊದಲ ಲೋಕಸಭಾ ಚುನಾವಣೆಯಲ್ಲಿ ಉಪಯೋಗಿಸಿದ ಕರಪತ್ರ. ದೇಶವು ಬ್ರಿಟಿಷರಿಂದ ಸ್ವತಂತ್ರ ಪಡೆದ ನಂತರ ಮೈಸೂರು ಶಾಸನಸಭೆಗೆ ಮತ್ತು ಲೋಕಸಭೆಗೆ ಭಾರತದಲ್ಲಿ ನಡೆದ ಮೊದಲ ಚುನಾವಣೆ ಇದಾಗಿದೆ.

ಈ ಚುನಾವಣೆಯ ಮೂಲಕ ಪಂಡಿತ ಜವಾಹರಲಾಲ್ ನೆಹರೂರವರು ಭಾರತ ಪ್ರಜಾಪ್ರಭುತ್ವದಿಂದ ಚುನಾಯಿತರಾದ ಮೊದಲ ಪ್ರಧಾನಿಯಾದರು. 1952ರ ಚುನಾವಣೆಯು ಭಾರತ ಅಳವಡಿಸಿಕೊಂಡಿರುವ ಪ್ರಜಾಪ್ರಭುತ್ವದ ದೃಷ್ಟಿಯಿಂದ ವಿಶೇಷವಾದದ್ದು. ಆಗ ಜೋಡೆತ್ತು ಕಾಂಗ್ರೆಸ್ ಪಕ್ಷದ ಗುರುತಾಗಿತ್ತು. ಶಿವಮೊಗ್ಗ ಜಿಲ್ಲೆಯಿಂದ ಕೆ.ಜಿ. ವಡೆಯರ್ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದರೆ, ಸಾಗರ ಹೊಸನಗರ ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಎ.ಆರ್. ಬದರಿನಾರಯಣ್ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಈಚೆಗೆ ನಮ್ಮ ತಂದೆಯವರ ಹಳೆಯ ಕಡತಗಳನ್ನು ಹುಡುಕುವಾಗ ಈ ಕರಪತ್ರವು ಸಿಕ್ಕಿತು.

—ಅಂಬುಜ ಶಿವಶಂಕರ, ಶಿವಮೊಗ್ಗ



॥ ವಂದೇ ಮಾತರಂ ॥

ನೊಗ ಕಟ್ಟಿದ ಜೋಡಿ ಎತ್ತುಗಳ ಗುರ್ತಿರುವ ಪೆಟ್ಟಿಗೆಯಲ್ಲೇ

ನಿಮ್ಮ ಓಟು

ಹಾಕಬೇಕಾಗಿ ಪ್ರಾರ್ಥನೆ.

ಜವಹರಲಾಲ್ ನೆಹರು,
ಕಾಂಗ್ರೆಸ್ ಅಧ್ಯಕ್ಷರು

ನವದೆಹಲಿ.

ಕಾಂಗ್ರೆಸ್ ಉಮೇದುವಾರರ ಗುರುತು

ಓಟು ಕೊಡುವ ತಾರೀಕು:

13—1—1952

ಕಾಂಗ್ರೆಸ್ ಉಮೇದುವಾರರು

ಮೈಸೂರು ಶಾಸನಸಭೆಗೆ...

ಸಾಗರ—ಹೊಸನಗರ ಕ್ಷೇತ್ರದಿಂದ:

ಎ. ಆರ್. ಬದರೀನಾರಾಯಣ್, ಬಿ. ಎ. ಬಿ. ಎಲ್.

ಲೋಕಸಭೆಗೆ...

ಶಿವಮೊಗ್ಗ ಜಿಲ್ಲಾ ಕ್ಷೇತ್ರದಿಂದ:

ಕೆ. ಜಿ. ವಡೆಯರ್.

@jha

**ನೀವೂ ಬರೆಯಿರಿ**

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in